ಪರಿಷತ್‌ನಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ ಸ್ಪಷ್ಟನೆ

# ಬಾಗಲಕೋಟೆ ತೋಟಗಾರಿಕಾ ವಿವಿ ಮುಚ್ಚಲ್ಲ, ವಿಲೀನ ಮಾಡುವುದಿಲ್ಲ

ವಿಧಾನಪರಿಷತ್: ಬಾಗಲಕೋಟೆಯಲ್ಲಿರುವ ಕೃಷಿ ತೋಟಗಾರಿಕಾ ವಿವಿ ಮುಚ್ಚುವಾದಾಗಲೀ ಇಲ್ಲವೇ ಬೇರೆ ವಿವಿಗೆ ವಿಲೀನ ಮಾಡುವ ಪ್ರಶ್ನೆ ಸರಕಾರದ ಮುಂದಿಲ್ಲ ಎಂದು ಸಚಿವ ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು.

ಸದಸ್ಯ ಹನುಮಂತ ನಿರಾಣಿಯವರು ತೋಟಗಾರಿಕಾ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ಈ ಕುರಿತು ಪ್ರಶ್ನೆ ಮಾಡಿದರು. ಸಚಿವರ ಪರವಾಗಿ ಉತ್ತರಿಸಿದ ಸಚಿವ ಚಲುವರಾಯಸ್ವಾಮಿ, ತೋಟಗಾರಿಕೆ ವಿವಿ ಮುಚ್ಚುತ್ತೇವೆ ಎಂದು ಹೇಳುತ್ತಿರುವುದು ಸರಿಯಲ್ಲ, ಸರಕಾರದ ಮುಂದೆ ಪ್ರಸ್ತಾವನೆ ಇಲ್ಲ. ವದಂತಿ ಸುದ್ದಿಗಳನ್ನು ನಂಬಬಾರದು. ವಿವಿಯನ್ನು ಬೇರೆ ವಿವಿಗೆ ವಿಲೀನ ಮಾಡುವ ಪ್ರಸ್ತಾವನೆಯು ಸರಕಾರದ ಮುಂದಿಲ್ಲ. ಸಚಿವನಾಗಿ ನಾನು ಈ ಸದನಕ್ಕೆ ಸ್ಪಷ್ಟಪಡಿಸುತ್ತಿದ್ದೇನೆ. ಗಾಳಿ ಸುದ್ದಿಗಳಿಗೆ ಜನಪ್ರತಿನಿಧಿಗಳು ಇಲ್ಲವೇ ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡಬಾರದು. ಈ ವಿವಿಯನ್ನು ವಿಲೀನ ಮಾಡುವುದರ ಕುರಿತು ರಾಜ್ಯ ಸರಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ವಿಜಯ ಭಾಸ್ಕರ್ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಸರಕಾರಕ್ಕೆ ಈವರೆಗೂ ಅಂತಿಮ ವರದಿ ಅವರು ಸಲ್ಲಿಸಿಲ್ಲ, ಮಾಧ್ಯಮಗಳಲ್ಲಿ ಬರುವ ಸುದ್ದಿಗೆ ನಾವು ಉತ್ತರ ಕೊಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಇದಕ್ಕೂ ಮುನ್ನ ಸದಸ್ಯರಾದ ಹನುಮಂತ ನಿರಾಣಿ ಮತ್ತು ಪಿ.ಎಚ್.ಪೂಜಾರ್ ಮಾತನಾಡಿ, ಬಾಗಲಕೋಟೆ ವಿವಿಯನ್ನು ಬೇರೊಂದು ವಿವಿಗೆ ವಿಲೀನ ಮಾಡಬಾರದು. ರಾಜ್ಯದ



**ಈ ಅಧಿವೇಶನ ಮುಗಿಯುವದರೊಳಗೆ ವರದಿ ಸರಕಾರಕ್ಕೆ ವರದಿ ನೀಡಬಹುದು. ನಂತರ ಏನು ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಸರಕಾರ ನಿರ್ಧರಿಸುತ್ತದೆ. ಆದರೆ ಒಂದಂತೂ ಸತ್ಯ. ಯಾವುದೇ ಬದಲಾವಣೆ ಮಾಡುವ ಪ್ರಶ್ನೆ ಇಲ್ಲ. ವರದಿ ಬಂದ ನಂತರ ಇದರ ಸಾಧಕ-ಬಾಧಕಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಲಾಗುವುದು. ಆಗತ್ಯಬಿದ್ದರೆ ಸಂಬಂಧಪಟ್ಟ ಜನಪ್ರತಿನಿಧಿಗಳನ್ನು ಸಭೆಗೆ ಆಹ್ವಾನಿಸಲಾಗುವುದು.**

-ಚಲುವರಾಯಸ್ವಾಮಿ, ಸಚಿವ

ಸುಮಾರು 24 ಕಾಲೇಜುಗಳ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಾರೆ. ಇದನ್ನು ವಿಲೀನ ಮಾಡುತ್ತಿರುವುದಕ್ಕೆ ಅಲ್ಲಿನ ಸ್ಥಳೀಯರು ವಿರೋಧ ವ್ಯಕ್ತಪಡಿಸಿದ್ದಾರೆ ಎಂದು ಗಮನ ಸೆಳೆದರು.

Vishwa Vani. Spl. Pg.05

# ತೋಟಗಾರಿಕಾ ವಿವಿ ಮುಚ್ಚಲ್ಲ

ವಿಧಾನಸಭೆ: ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾಲಯವನ್ನು ಯಾವುದೇ ಕಾರಣಕ್ಕೂ ಮುಚ್ಚುವ ಅಥವಾ ವಿಲೀನಗೊಳಿಸುವ ಯಾವ ನಿರ್ಧಾರವನ್ನು ಸರ್ಕಾರ ಕೈಗೊಳ್ಳುವುದಿಲ್ಲ ಎಂದು ಕೃಷಿ ಸಚಿವ ಚೆಲುವರಾಯಸ್ವಾಮಿ ತೋಟಗಾರಿಕಾ ಸಚಿವರ ಪರವಾಗಿ ಉತ್ತರಿಸಿದರು.



ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಹಣಮಂತ ನಿರಾಣಿ ತೋಟಗಾರಿಕಾ ವಿವಿ ಮುಚ್ಚುವ ಆತಂಕ ಎದುರಾದ ವಿಷಯ ಪ್ರಸ್ತಾಪಿಸಿದ ಹಿನ್ನೆಲೆಯಲ್ಲಿ ತೋಟಗಾರಿಕಾ ಸಚಿವರ ಅನುಪಸ್ಥಿತಿಯಲ್ಲಿಯೂ ಈ ಆತಂಕಕ್ಕೆ ಕೃಷಿ ಸಚಿವರು ತೆರೆ ಎಳೆದರು. ಕೃಷಿ ವಿವಿಗಳಿಗೆ ಸಂಬಂಧಿಸಿದಂತೆ ತ.ಮ. ವಿಜಯಭಾಸ್ಕರ ಅವರ ವರದಿ ಇನ್ನೂ ಸಲ್ಲಿಕೆಯಾಗಿಲ್ಲ, ಆ ವರದಿ ಬಂದ ನಂತರ ಮತ್ತೆ ಈ ವಿಷಯ ಚರ್ಚೆ ಮಾಡೋಣ, ವಿಶ್ವವಿದ್ಯಾಲಯ ಮುಚ್ಚುವ ನಿರ್ಧಾರವಂತೂ ಇಲ್ಲವೇ ಎಂದು ಭರವಸೆ ನೀಡಿದರು.

Samyuktha Kar. Pg.05

# ತೋಟಗಾರಿಕಾ ವಿಶ್ವವಿದ್ಯಾಲಯ ಮುಚ್ಚುವುದಿಲ್ಲ

ಬೆಂಗಳೂರು: ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾಲಯವನ್ನು ಮುಚ್ಚುವ ಅಥವಾ ವಿಲೀನಗೊಳಿಸುವ ನಿರ್ಧಾರವನ್ನು ಸರ್ಕಾರ ಕೈಗೊಳ್ಳುವುದಿಲ್ಲ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ತೋಟಗಾರಿಕಾ ಸಚಿವರ ಪರವಾಗಿ ಉತ್ತರಿಸಿದರು. ವಿಧಾನ ಪರಿಷತ್ತಿನ ಪ್ರಶ್ನೋತ್ತರ ಕಲಾಪ ವೇಳೆ ಸದಸ್ಯ ಹಣಮಂತ ನಿರಾಣಿ ತೋಟಗಾರಿಕಾ ವಿವಿ ಮುಚ್ಚುವ ಆತಂಕ ಎದುರಾದ ವಿಷಯ ಪ್ರಸ್ತಾಪಿಸಿದ ಹಿನ್ನೆಲೆಯಲ್ಲಿ ತೋಟಗಾರಿಕಾ ಸಚಿವರ ಅನುಪಸ್ಥಿತಿಯಲ್ಲಿಯೂ ಈ ಆತಂಕಕ್ಕೆ ಕೃಷಿ ಸಚಿವರು ತೆರೆ ಎಳೆದರು. ಕೃಷಿ ವಿವಿಗಳಿಗೆ ಸಂಬಂಧಿಸಿದಂತೆ ತ.ಮ. ವಿಜಯಭಾಸ್ಕರ ಅವರ ವರದಿ ಇನ್ನೂ ಸಲ್ಲಿಕೆಯಾಗಿಲ್ಲ, ವರದಿ ಬಂದ ನಂತರ ಮತ್ತೆ ಈ ವಿಷಯ ಚರ್ಚೆ ಮಾಡೋಣ, ವಿಶ್ವವಿದ್ಯಾಲಯ ಮುಚ್ಚುವ ನಿರ್ಧಾರ ಇಲ್ಲ ಎಂದು ಭರವಸೆ ನೀಡಿದರು.



Vijaya Vani Pg.05ac

ಕೃಷಿ ವಾಣಿಜ್ಯ

Samyuktha Kar. Pg.10

ಅಂಬೆ ಬೆಳೆಗೆ ವಿಜಯಪುರ ರಾಜ್ಯದಲ್ಲಿಯೇ ಹೆಸರುವಾಸಿ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಅದರಲ್ಲೂ ಇಂಡಿ ತಾಲೂಕಿನಲ್ಲಂತೂ ಬೆಳೆಯುವ ಅಂಬೆ ತನ್ನ ಆಕರ್ಷಕ ರೂಪ ಹಾಗೂ ಸ್ವಾದದಿಂದಾಗಿ ಗ್ರಾಹಕರ ವಲಯದಲ್ಲಿ ಮನೆಮಾತಾಗಿದೆ. ಇದೀಗ ಅದು ಆಸ್ಟ್ರೇಲಿಯಾ ಮಾರುಕಟ್ಟೆಯಲ್ಲಿ ತನ್ನ ಪಾರಮ್ಯ ಮೆರೆಯಲು ಹೊರಟಿದೆ

# ಆಸ್ಟ್ರೇಲಿಯಾಕ್ಕೆ ಇಂಡಿಯ ರಸಭರಿತ ಲಿಂಬೆ

ವಾಸುದೇವ ಹೆರಕಲ್ಲ

ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ರಸಭರಿತ ಲಿಂಬೆ ಇದೀಗ ಆಸ್ಟ್ರೇಲಿಯಾ ದೇಶವನ್ನು ತಲುಪಿದೆ. ಲಿಂಬೆ ಅಭಿವೃದ್ಧಿ ಮಂಡಳಿಯ ಪ್ರಯತ್ನ ಹಾಗೂ ಬೆಂಗಳೂರಿನ ಅಪೆಡಾ ಸಂಸ್ಥೆಯ ಸಮರ್ಪಕ ಸಹಯೋಗದಲ್ಲಿ ಪ್ರಪ್ರಥಮ ಬಾರಿಗೆ ಟ್ರಾಗ್ ಪಡೆದಿರುವ ಇಂಡಿಯ ಲಿಂಬೆಯನ್ನು ಆಸ್ಟ್ರೇಲಿಯಾಗೆ ಕಳುಹಿಸಲಾಗಿದೆ.

ಅಪೆಡಾ ಸಂಸ್ಥೆ ಜಿ.ಐ.ಟ್ಯಾಗ್ ಹೊಂದಿರುವ ತೋಟಗಾರಿಕೆ ಬೆಳೆಗಳನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಪರಿಚಯಿಸುವ ಉತ್ಪತ್ತಿಮ ಕಾರ್ಯ ಮಾಡುತ್ತಿದ್ದು, ಅದರ ಅಂಗವಾಗಿ ಇಂಡಿಯ ಲಿಂಬೆಯ ಸ್ಯಾಂಪಲ್‌ನ್ನು ಆಸ್ಟ್ರೇಲಿಯಾದ ಪ್ರಮುಖ ಮಾರುಕಟ್ಟೆಗೆ ತಲುಪಿಸಿದೆ. ಇಂಡಿಯ ಲಿಂಬೆಗೆ ಆಸ್ಟ್ರೇಲಿಯಾ ಮಾರುಕಟ್ಟೆಯಿಂದ ಉತ್ತಮ ಪ್ರತಿಕ್ರಿಯೆ ದೊರಕಿದೆ ಎನ್ನಲಾಗುತ್ತಿದೆ. ಒಟ್ಟೊಮ್ಮೆ ಆಸ್ಟ್ರೇಲಿಯಾದ ಗಾತ್ರಕ್ಕೂ ಮನಸೋತರೆ ಪ್ರತಿ ವರ್ಷ ಇಲ್ಲಿಂದ ಆಸ್ಟ್ರೇಲಿಯಾ ಮಾರುಕಟ್ಟೆಗೆ ಇಂಡಿ ಲಿಂಬೆ ರಾಷ್ಟ್ರ ಇಡಲಿದೆ.

ಜಿಯೊಗ್ರಾಫಿಕಲ್ ಟ್ಯಾಗ್‌ಲೈನ್ ದೊರೆತ ಪರಿಣಾಮವಾಗಿ ಇಂಡಿಯ ಲಿಂಬೆ ಅಂತಾರಾಷ್ಟ್ರೀಯ ಮಾರುಕಟ್ಟೆಯನ್ನು ಪ್ರವೇಶಿಸಲು ಸಾಧ್ಯವಾಗುತ್ತಿದೆ. ಇದು ಆರಂಭ ಮಾತ್ರ. ಟ್ಯಾಗ್‌ಲೈನ್ ನೋಡಿ ಇನ್ನಿತರ ದೇಶಗಳು ಇಂಡಿ ಲಿಂಬೆಯನ್ನು ತರಿಸಿಕೊಳ್ಳಲು ಆಸಕ್ತಿ ತೋರಬಹುದಾಗಿದೆ ಹಾಗಾಗಿದ್ದೇ ಅದನ್ನೆ ಇಂಡಿಯಲ್ಲಿ ಲಿಂಬೆ ಅಭಿವೃದ್ಧಿ ಮಂಡಳ ಸ್ಥಾಪಿಸಿದ್ದು ಸಾರ್ಥಕವಾಗುತ್ತದೆ. ಲಿಂಬೆ ಬೆಳೆ ರೈತರ ಬದುಕು ಹಸನಾಗುತ್ತದೆ.

**ಮಂಡಳಿಗೆ ಅನುದಾನದ ಹೊರತೆ**

ಇಂಡಿ ಶಾಸಕ ಯಶವಂತ್ರಾಯಗೌಡರ ಸತತ ಪ್ರಯತ್ನದ ಫಲವಾಗಿ ಲಿಂಬೆ ಅಭಿವೃದ್ಧಿ ಮಂಡಳ ಸ್ಥಾಪನೆಯಾಗಿದೆ. ಅದರ ಕೇಂದ್ರ ಕಚೇರಿಯೂ ಇಂಡಿಯಲ್ಲೇ ಇದೆ. ಆದರೆ ಸರ್ಕಾರ ಅಪೇಕ್ಷಿತ ಮಟ್ಟದಲ್ಲಿ ಈ ಮಂಡಳಿಗೆ ಅನುದಾನ ಬಿಡುಗಡೆ ಮಾಡಿಲ್ಲ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಈ ಮಂಡಳಿಗೆ ನೀಡಿದ ಅನುದಾನ ಬರೀ 50 ಲಕ್ಷ ರೂ. ಅಷ್ಟರಲ್ಲಿಯೇ ಅಭಿವೃದ್ಧಿ ಮಂಡಳ ರೈತರಿಗೆ ತರಬೇತಿ, ಇನ್ನಿತರ ತೋಟಗಾರಿಕೆ ಸಲಕರಣೆ ವಿತರಣೆ, ರೈತರಿಗೆ ಪ್ರವಾಸ ಸೇರಿದಂತೆ ಇನ್ನಿತರ ಕಾರ್ಯಕ್ರಮಗಳ ಕೃಷಿ ಯೋಜನೆ ತಯಾರಿಸಿ ಆದರತೆ ಕಾರ್ಯ ಮಾಡುತ್ತಿದೆ.

ಲಿಂಬೆ ಅಭಿವೃದ್ಧಿ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರಾಗಿ ಬರುವುದಕ್ಕೆ ಯಾವುದೇ ಅಧಿಕಾರಿ ತಯಾರಿಲ್ಲ. ಸಧ್ಯಕ್ಕೆ ವಿಜಯಪುರ ಜಿಲ್ಲಾ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಸ್.ಎಸ್.ಪಾಟೀಲ ಎಂಬ ಅಧಿಕಾರಿಯನ್ನು ಲಿಂಬೆ ಅಭಿವೃದ್ಧಿ ಮಂಡಳ ಎಂ.ಡಿ.ಹುದ್ದೆಗೆ 'ಇನ್‌ಚಾರ್ಜ್' ಮಾಡಲಾಗಿದೆ. ಪಾಟೀಲರು ಹಂಬಲ ಆಸಕ್ತಿಯಿಂದ ಕೆಲಸ ಮಾಡುತ್ತಿದ್ದಾರೆ. ಆದರೆ ಅವರಿಗೆ ಸಿಬ್ಬಂದಿಯ ಕೊರತೆ.

**ಆರ್‌ಡಿಡಿಎಫ್ ಅನುದಾನದ ಅಕಾರದ**

ಆರ್‌ಡಿಡಿಎಫ್ ಟ್ರಾಂಚ್-3 ರ ಅಡಿಯಲ್ಲಿ2025-26 ನೇ ಸಾಲಿಗೆ ಮುಖ್ಯಮಂತ್ರಿಗಳು ಅಮೋದನೆ ನೀಡಿರುವ ಅನುದಾನವೇ ಲಿಂಬೆ ಅಭಿವೃದ್ಧಿ ಮಂಡಳಿಗೆ ದೊಡ್ಡ ಆಕಾರದನವಾಗಿದೆ. ಈ ಕುರಿತು 2/8/2025 ರಂದು ಸರ್ಕಾರದ ಅನಧಿಕೃತ ಟಪ್ಪಣಿಯಲ್ಲಿ ವಿಜಯಪುರ ಲಿಂಬೆ ಅಭಿವೃದ್ಧಿಗಾಗಿ ಅಂದಾಜು ಮೊತ್ತದಾದ 13 ಕೋಟಿ ರೂ. ನಲ್ಲಿ ಆರ್‌ಡಿಡಿಎಫ್ ಸಾಲವಾಗಿ




# ವಿಧಾನ ಪರಿಷತ್

ಪ್ರಶ್ನೋತ್ತರ

ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾಲಯವನ್ನು ಬೇರೆ ವಿಶ್ವವಿದ್ಯಾಲಯಗಳ ಜತೆ ವಿಲೀನ ಮಾಡುವ ಅಥವಾ ಮುಚ್ಚುವಂತಹ ಯಾವುದೇ ಪ್ರಸ್ತಾವಗಳು ರಾಜ್ಯ ಸರ್ಕಾರದ ಮುಂದೆ ಇಲ್ಲ. ಯಾವುದೇ ಕಾರಣಕ್ಕೂ ಆ ವಿಶ್ವವಿದ್ಯಾಲಯವನ್ನು ಮುಚ್ಚುವುದಿಲ್ಲ. ಆ ಭಾಗದ ಶಾಸಕರಿಗೆ ಯಾರೋ ತಪ್ಪು ಮಾಹಿತಿ ನೀಡಿದ್ದು, ಈ ಬಗ್ಗೆ ಅವರಿಗೆ ತಿಳಿವಳಿಕೆ ಹೇಳಿ.

**ಎನ್.ಚಲುವರಾಯಸ್ವಾಮಿ,** ಕೃಷಿಸಚಿವ (ಪ್ರಶ್ನೆ: ಹಣಮಂತ ನಿರಾಣಿ, ಬಿಜೆಪಿ)

Praja vani Pg.10

Vijaya Kar. Pg.12

# ಮಾವು ಬೆಳೆಗಾರರಿಗೆ ಸಕಾಲಕ್ಕೆ ಸಿಗದ ಪರಿಹಾರ

## ದಾಖಲೆಗಳ ಪರಿಶೀಲನೆ ನೆಪದಲ್ಲಿ ವಿಳಂಬ । ನಿತ್ಯ 400 ಬಿಲ್‌ಗೆ ಮಾತ್ರವೇ ಹಣ ಪಾವತಿ

■ ವೆಂ.ಸುನೀಲ್ ಕುಮಾರ್ ಕೋಲಾರ
sunil.kumar14@timesofindia.com

ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಮಾವು ಬೆಳೆಗಾರರಿಂದ ಮಾವು ಖರೀದಿಸಿ ತಿಂಗಳು ಕಳೆಯುತ್ತಿದ್ದರೂ ಸರಕಾರ ಘೋಷಿಸಿದ 4 ರೂ. ಪರಿಹಾರ ಹಣ ಬೆಳೆಗಾರರಿಗೆ ಸಕಾಲಕ್ಕೆ ದೊರೆಯದಂತಾಗಿದೆ.

ಸೂಕ್ತ ಮಾರುಕಟ್ಟೆ ದೊರೆಯದೆ ಸಂಕಷ್ಟದಲ್ಲಿದ್ದ ಮಾವು ಬೆಳೆಗಾರರ ಬವಣೆಗಳಿಗೆ ದಾಮಿಸಿದ್ದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪ್ರತಿ ಕೆ.ಜಿ ತೋತಾಪುರಿ ಮಾವಿಗೆ 4 ರೂ. ಪರಿಹಾರವನ್ನು ಘೋಷಿಸಿದ್ದವು. ಖರೀದಿ ಪ್ರಕ್ರಿಯೆ ಮುಗಿದು ತಿಂಗಳಾಗುತ್ತಿದ್ದರೂ ಬೆಳೆಗಾರರಿಗೆ ಪರಿಹಾರ ಸಂದಾಯ ವಾಗದಿರುವುದು ಬೇಸರಕ್ಕೆ ಕಾರಣವಾಗಿದೆ.

ಕೋಲಾರ ಜಿಲ್ಲೆಯಲ್ಲಿ ಜೂನ್ 25ರಿಂದ ಜುಲೈ 24ರ ವರೆಗೆ 14 ಸಾವಿರ ಬೆಳೆಗಾರರಿಂದ ಬರೋಬ್ಬರಿ 10 ಲಕ್ಷ ಕ್ವಿಂಟಾಲ್‌ಗೂ ಹೆಚ್ಚಿನ ಮಾವು ಖರೀದಿಸಲಾಗಿತ್ತು. ರೈತರಿಗೆ ಅಂದಾಜು 41 ಕೋಟಿಗೂ ಹೆಚ್ಚಿನ ಪರಿಹಾರ ಬಿಡುಗಡೆಯಾಗಬೇಕಿದೆ. ಆದರೆ, ಪರಿಶೀಲನೆ ನೆಪದಲ್ಲಿ ಪರಿಹಾರ ಬಿಡುಗಡೆ ವಿಳಂಬವಾಗುತ್ತಿದ್ದು, ಬೆಳೆಗಾರರು ತೊಂದರೆ ಅನುಭವಿಸುವಂತಾಗಿದೆ. ಮಾವು ಮಾರಾಟ ಸಂಬಂಧ ದಲ್ಲಾಳಿಯೂ ರೈತರು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಲು, ಟೆಂಪೋಸ್ಟ್‌ನಲ್ಲಿ ಪ್ರವೇಶಪತ್ರ, ನೇಬ್ರಾಡ್ಜ್ ಚೀಟಿ, ಎಪಿಎಂಸಿ ಮಂಡಿ/ಸಂಸ್ಕರಣಾ ಘಟಕಗಳ ಬಿಲ್ಲು, ಆಧಾರ್ ಸೇರಿದಂತೆ ಇತರ ದಾಖಲೆಗಳನ್ನು ಸಲ್ಲಿಸಲು ಪರದಾಡಿದ್ದರು. ಆಗತ್ಯ ಮಾವಿಗೆ ಸೂಕ್ತ ಬೆಲೆ ಸಿಗದ ಕಾರಣದಿಂದಾಗಿ ಮಾವು ಬೆಳೆಗಾರರು ಪ್ರಸಕ್ತ ಸಾಲಿನಲ್ಲಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರು. ಈಗ ಸರಕಾರ ಪರಿಹಾರ ಬಿಡುಗಡೆಯಲ್ಲಿ ವಿಳಂಬದೋರಣೆ ಅನುಸರಿಸುತ್ತಿರುವುದು ಸಹ ಬೆಳೆಗಾರರ ಆಕ್ರೋಶಕ್ಕೆ ಕಾರಣವಾಗಿದೆ.

**ನಿತ್ಯ 400 ಬಿಲ್‌ಗೆ ಪರಿಹಾರ ಬಿಡುಗಡೆ:** ಮಾವು ಅಭಿವೃದ್ಧಿ ಮಂಡಳಿಯಿಂದ ಮಾವು ಬೆಳೆಗಾರರಿಗೆ ಪರಿಹಾರ ಹಣ ಬಿಡುಗಡೆಯಾಗುತ್ತಿದೆ. ನಿತ್ಯ 400 ಬಿಲ್‌ಗಳಿಗೆ ಹಣ ಜಮೆಯಾಗಿ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ 22 ಸಾವಿರ ಬಿಲ್‌ಗಳನ್ನು ಸೃಜಿಸಿದ್ದು 4 ಸಾವಿರ ಬಿಲ್‌ಗಳಿಗೆ ಮಾತ್ರವೇ ಪರಿಹಾರ ಬಿಡುಗಡೆಯಾಗಿದೆ. ಉಳಿದ 18 ಸಾವಿರ ಬಿಲ್‌ಗಳಿಗೆ ಪರಿಹಾರ ನೀಡಲು 45 ದಿನಗಳು ಬೇಕಾಗಲಿದೆ.



- ನೋಂದಣಿ ಮಾಡಿಕೊಂಡ ರೈತರು: **14,993**
- ಖರೀದಿಸಿದ ಮಾವು: **10.23** ಲಕ್ಷ (ಕ್ವಿಂಟಾಲ್)
- ಬಿಡುಗಡೆಯಾಗಬೇಕಿರುವ ಪರಿಹಾರ: **₹41.35** ಕೋಟಿ
- ಸೃಜಿಸಿರುವ ಬಿಲ್‌ಗಳು: **22,000**
- ಬೆಳೆಗಾರರಿಗೆ ಪಾವತಿಯಾದ ಮೊತ್ತ: **₹9** ಕೋಟಿ (ಆ.16ರವರೆಗೆ)
- ಈವರೆಗೆ ಪಾವತಿಯಾದ ಬಿಲ್‌ಗಳು: **4000**

ಬೆಳೆಗಾರರು ಸಲ್ಲಿಸಿರುವ ಬಿಲ್‌ಗಳ ಮಾಹಿತಿಯನ್ನು ಸಂಪೂರ್ಣವಾಗಿ ಪರಿಶೀಲಿಸಿದ ಬಳಿಕ ಬಿಲ್ ಪಾವತಿಸಲಾಗುತ್ತಿದ್ದು, ಈವರೆಗೆ 4 ಸಾವಿರ ಬಿಲ್‌ಗಳಿಗೆ 9 ಕೋಟಿ ರೂ. ಪಾವತಿಸಲಾಗಿದೆ. ಶೀಘ್ರವೇ ಎಲ್ಲ ಬೆಳೆಗಾರರಿಗೆ ಬಿಲ್ ಪಾವತಿಯಾಗಲಿದೆ.

**- ರವಿಕುಮಾರ್** ಕಾರ್ಯದರ್ಶಿ
ಎಪಿಎಂಸಿ ಶ್ರೀನಿವಾಸಪುರ

ಗ್ಯಾರಂಟಿ ಯೋಜನೆಗಳಲ್ಲಿ ಲಕ್ಷಾಂತರ ಫಲಾನುಭವಿಗಳಿಗೆ ಸಾವಿರಾರು ಕೋಟಿಗಳನ್ನು ಒಂದೇ ಬಾರಿಗೆ ಹಣ ವರ್ಗಾವಣೆ ಮಾಡಲಾಗುತ್ತಿದೆ. ಆದರೆ, ಮಾವು ಬೆಳೆಗಾರರಿಗೆ 41 ಕೋಟಿ ರೂ. ಬಿಡುಗಡೆ ಮಾಡಲು ವಿಳಂಬ ಧೋರಣೆ ಅನುಸರಿಸುತ್ತಿದ್ದು, ಕೂಡಲೇ ಎಲ್ಲ ಬೆಳೆಗಾರರಿಗೆ ಪರಿಹಾರ ಬಿಡುಗಡೆ ಮಾಡಬೇಕು.

**-ಟಿ.ಎಸ್.ರಮೇಶ್** ಮಾವು ಬೆಳೆಗಾರ



# Centre suspends import duty on cotton till Sept. 30

The Ministry of Finance has suspended the 11% import duty on cotton till September 30. In a notification issued on Monday, the Ministry said that customs duty will not be levied from August 19 to September 30 on cotton imports. Since February 2021, the imports were subject to 11% duty (5% basic customs duty, 5% agriculture infrastructure and development cess and a 1% social welfare surcharge on both). The waiver is expected to help mills facing high input costs.

The Hindu Pg.15

# Removal of 11% duty on cotton may impact domestic price and farmers

JITENDRA CHOUBEY @ New Delhi

TO appease the US government amid unilateral Trump tariffs, the Centre has removed the cumulative import duty of 11% on cotton, just a month before the new crop is set to enter the domestic market.

The import duty is removed with immediate effect, from August 19 to September 30. This decision may lead to an estimated loss of around ₹170 crore for the state exchequer and adversely affect farmers, as it is likely to flood the Indian market with cheaper cotton from the US. India primarily imports cotton from the United States, Australia, and Egypt.

Meanwhile, the US is a major exporter of cotton to India, with significant import volumes. In 2023, India imported raw cotton primarily from the United States ($236 million), Australia ($132 million), Egypt ($124 million), Brazil ($22.1 million), and Tanzania ($19.3 million).

Reports suggest that the government's cotton procurement agency, Cotton Corporation of India, had also recommended the import of cotton. Sources said the textiles ministry was not willing to remove the duty a week back.

Experts estimate that this influx could suppress domestic cotton prices by 10-15%. While cheaper imports may benefit the textile industry, farmers and traders may bear the brunt of this policy.

Currently, the cotton price in the open market is around ₹57,000 per candy (355.6 kg). Experts speculate the price may crash to around ₹50,000 per candy by October.

In recent years, Indian cotton has become increasingly expensive, and acreage has been reducing, which has negatively impacted the sustainability of the domestic textile industry.

Dhiren Seth, cotton trade expert, appreciates the government's action but said the window of opportunity for the trade is too small.

"The government's move will help industry and increase global competitiveness of Indian cotton as it will create parity between global and Indian cotton prices," said Seth. "However, the window is too small, just 40 days, as it is not going to be effective," he further adds.

**AMID TARIFF ROW**



India temporarily removed **11%** import duty on Cotton for the next **40** days

Experts see it as an attempt to appease US government to increase imports. US is the largest exporter of Cotton to India

Removal of import duty will benefit the textile industry, but will suppress domestic prices & hurt farmers

India's cotton acreage and production have been declining over the past four years due to pest attacks and unfavourable weather

Between 2020–21 and 2024–25, India's cotton cultivation decreased from **132.86 lakh** hectares to **112.30 lakh**

Indian Exp. Pg.09

# No milling of hybrid varieties, Punjab likely to face paddy procurement crisis

HARPREET BAJWA @ Chandigarh

WITH paddy cultivation touching an all-time high of 32.49 lakh hectares in Punjab, the state is once again staring at a procurement and storage crisis this kharif season. Rice millers have declared they will not mill hybrid varieties, even as the Punjab and Haryana HC on Monday struck down the state's ban on such seeds.

The situation is already tight. As of now, 146 LMT of rice and 77.86 LMT of wheat are stored in Food Corporation of India godowns across Punjab — almost touching the full storage capacity of 180 LMT. With another 190 LMT of paddy expected to arrive in mandis, the state is running out of space.

Millers insist that hybrid paddy is unviable. "The outturn ratio should be 66 per cent, but in hybrids, broken rice is as high as 45 per cent. We have to buy rice at our own cost to meet FCI norms. Why should we suffer?" asked Punjab Rice Industry Association vice-president Ranjit Singh Jossan. The association has demanded that reports prepared by IIT Kharagpur on hybrid varieties last year be made public.

Association chief Bharat Bhushan Binta added that four lakh tonnes of last year's paddy are still lying with millers. "The government must allow trials of hybrids since FCI specifications allow 25% broken rice," he said.

Farmers, however, have continued sowing hybrids across Majha, Doaba and even Malwa, lured by higher yields. But with millers refusing to process them, tensions are rising. Unless a solution is worked out, Punjab could see a repeat of last year's bitter standoff.




Indian Exp. Pg.10

# 'Horticulture varsity not to be shut or merged'

BENGALURU, DHNS: Agriculture Minister N Chaluvarayaswamy assured the Council that the government would not shut down or merge the Bagalkot Horticulture University.

The debate was triggered by reports of recommendations reportedly made by the committee headed by retired chief secretary T M Vijay Bhaskar that agriculture & horticulture varsities be merged. "The panel will submit report after session. Only then will we discuss it. For now, it will neither be shut nor merged," he said.

Deccan Herald Pg.03

## ಬಾಹ್ಯಾಕಾಶ ನಿಲ್ದಾಣದಲ್ಲಿ ಮೊಳಕೆಯೊಡೆದಿದ್ದ ಕಾಳುಗಳು ಕೃಷಿ ವಿವಿಗೆ

# ಧಾರವಾಡದಲ್ಲಿ ಹೆಸರು, ಮೆಂತ್ಯೆ ಮೊಳಕೆ ಅಧ್ಯಯನ

ವಿಕ ಸುದ್ದಿಲೋಕ ಧಾರವಾಡ

ಜೀವಶಾಸ್ತ್ರ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಸಂಶೋಧನೆಗೆ ಆಕ್ಸಿಯಂ-4 ಮಿಷನ್ ಅಡಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಮೊಳಕೆ ಪ್ರಯೋಗಕ್ಕೆ ಕಳುಹಿಸಿದ ಮೆಂತ್ಯೆ, ಹೆಸರು ಕಾಳುಗಳು ಇನ್ನೆರಡು ದಿನಗಳಲ್ಲಿ ಧಾರವಾಡ ಕೃಷಿ ವಿವಿಗೆ ಬರಲಿದ್ದು, ವಿಸ್ತೃತ ಅಧ್ಯಯನಕ್ಕೆ ಚಾಲನೆ ದೊರೆಯಲಿದೆ.

ಜೂನ್ 25ರಿಂದ ಜುಲೈ 15ರವರೆಗೆ ಬಾಹ್ಯಾಕಾಶ ನಿಲ್ದಾಣದಲ್ಲಿ ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಸೇರಿ ಅವರ ತಂಡದವರು ನಡೆಸಿದ ಸಂಶೋಧನೆ ಭಾಗವಾಗಿರುವ ಮೊಳಕೆಯೊಡೆದ ಮೆಂತ್ಯೆ ಹಾಗೂ ಹೆಸರುಕಾಳುಗಳು ಅಮೆರಿಕದಿಂದ ಬೆಂಗಳೂರಿಗೆ ತಲುಪಿದೆ. ನಿಯಮಗಳನ್ವಯ ಅಗತ್ಯ ದಾಖಲೆಗಳನ್ನು ಇನ್ನೂ ಪೂರೈಸಿಕೊಳ್ಳಬೇಕಿದ್ದು, ಇನ್ನೆರಡು ದಿನಗಳಲ್ಲಿ ಅವುಗಳನ್ನು ಮೈಸೂರ್ ಕ್ಯಾಮಾನ ಪೆಟ್ಟಿಗೆಯಲ್ಲಿ ಧಾರವಾಡಕ್ಕೆ ಕಳುಹಿಸಲಿದ್ದಾರೆ. ವಿಜ್ಞಾನಿ ರವಿಕುಮಾರ್ ಹೊಸಮನಿ, ಸುಧೀರ್ ಸಿದ್ಧಾಪುರರವರನ್ನೊಳಗೊಂಡ ವಿಜ್ಞಾನಿಗಳು ಅಧ್ಯಯನ ನಡೆಸಲಿದ್ದಾರೆ.

ಬಾಹ್ಯಾಕಾಶದಲ್ಲಿ ಹೆಸರು, ಮೆಂತ್ಯೆ ಬೀಜಗಳ ಮೊಳಕೆ ಪ್ರಮಾಣ, ಮೊಳಕೆಯಾಗಲು ತೆಗೆದುಕೊಂಡ ಗುಣಮಟ್ಟ, ಸೈಟೊಹಾರ್ಮೋನ್‌ಗಳ ಚಟುವಟಿಕೆ, ಜೀವಸೂತ್ರ (ಡಿಎನ್‌ಎ ಕ್ರಿಪ್ಟೋಮ್) ಪರೀಕ್ಷೆ ಧಾರವಾಡ ಕೃಷಿ ವಿವಿಯಲ್ಲಿ ನಡೆಯಲಿದೆ. ಮೊಳಕೆಯ ಮೇಲೆ ಸೂಕ್ಷ್ಮ ಗುರುತ್ವಾಕರ್ಷಣೆ ಪ್ರಭಾವದ ಬಗೆಗಿನ ಅಧ್ಯಯನದ ಭಾಗವಾಗಿದೆ. ಗಗನಯಾತ್ರಿಗಳ ಆರೋಗ್ಯಕರ ತರಕಾರಿ ಸರಬರಾಜಿನ ಅಭಿವೃದ್ಧಿಗೂ ಇದು ಸಹಕಾರಿ ಆಗುವ ನಿರೀಕ್ಷೆ ಮೂಡಿಸಿದೆ.

ಟೊಮ್ಯಾಟೊ, ಮೂಲಂಗಿ, ಎಲೆಕೋಸು, ಕ್ಯಾರೆಂಟ್‌ನಂತಹ ಬೆಳೆಗಳನ್ನು ಅಂತರಿಕ್ಷದಲ್ಲಿ ಆಹಾರ ರೂಪದಲ್ಲಿ ಬೆಳೆಯಬಹುದು. ಆದರೆ ಅದಕ್ಕೆ ನಿಯಂತ್ರಿತ ಪರಿಸರ, ಬೆಳಕು, ತಾಪಮಾನ, ಕೇವಾಂಶ, ಕಾರ್ಬನ್ ಡೈಆಕ್ಸೈಡ್, ನೀರು ಬೇಕು. ಇದರ ಬದಲಾಗಿ ಸಾಜ ಮೊಳಕೆ ಬೀಜಗಳನ್ನು ಬೆಳೆಸಲು ಸರಳ ಕಂಟೇನರ್, ಕೈಯಿಂದ ನೀರು ಹಾಕುವ ವ್ಯವಸ್ಥೆ ಸಾಕು. ಇವು ಹೆಚ್ಚು ಪೋಷಕಾಂಶ ನೀಡುವುದು. ಹೀಗಾಗಿ ಹೆಸರು, ಮೆಂತ್ಯೆ ಮೊಳಕೆ ಅಧ್ಯಯನ ನಡೆಸಲಾಗಿದೆ.

### ಗಗನಯಾನಿಗಳಿಗೆ ಮೊಳಕೆ ಕಾಳು ಏಕೆ?

ಗಗನಯಾತ್ರಿಗಳಿಗೆ ಸದ್ಯ ಪ್ಯಾಕೇಜ್ ಫುಡ್ ಪೂರೈಸಲಾಗುತ್ತಿದೆ. ಒಬ್ಬ ಗಗನಯಾತ್ರಿಗೆ ದಿನಕ್ಕೆ 1.8 ಕೆ.ಗ್ರಾಂ ಆಹಾರ ಬೇಕು. ಅದನ್ನು ಪೂರೈಸಲು ಈಗ ಪ್ರತಿ ಕೆ.ಗ್ರಾಂಗೆ 2000 ದಿಂದ 4000ರವರೆಗೆ ಡಾಲರ್ ಖರ್ಚಾಗುತ್ತಿದೆ. ಆದರೆ ಇದು ಅವರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಸಂಸ್ಕರಿಸಿದ ಪ್ಯಾಕೇಜ್ ಫುಡ್ ನಿರಂತರ ಬಳಕೆಗೆ ಗಗನಯಾನಿಗಳಿಗೆ ಸಾಧ್ಯ ಆಗುತ್ತಿಲ್ಲ. ಆಹಾರದ ಬದಲಾವಣೆ ಭಾಗವಾಗಿ ಅಲ್ಲಿಯೇ ತಾಜಾ ಆಹಾರ ಬೆಳೆ. ಅದನ್ನು ಸಪ್ಲಿಮೆಂಟ್ ಫುಡ್ ಆಗಿ ಬಳಸಲು ಮೆಂತ್ಯೆ, ಹೆಸರು ಮೊಳಕೆ ಅಧ್ಯಯನ ನಡೆಸಲಾಗಿದೆ. ಇದು ಗಗನಯಾನಿಗಳಲ್ಲಿ ವಿಕಿರಣ ಶಕ್ತಿ ಹೆಚ್ಚಿಸಲಿದೆ. ವಿಲುಬಿನ ಆರೋಗ್ಯ ಉತ್ತಮಗೊಳಿಸಿ ಮೂತ್ರಕೋಶದಲ್ಲಿ ಕಲ್ಲು ರಚನೆಯ ಅಪಾಯವನ್ನು ಕಡಿಮೆ ಮಾಡಲಿದೆ. ಹೃದಯ ಸಮಸ್ಯೆಗಳಿಗೆ ಪರಿಹಾರ ನೀಡಿ ಮಾನಸಿಕ ಸ್ಥಿತಿ ಗಟ್ಟಿಗೊಳಿಸುವುದು ಎಂದು ಕೃಷಿ ವಿವಿ ವಿಜ್ಞಾನಿಗಳು 'ವಿಜಯ ಕರ್ನಾಟಕ'ಕ್ಕೆ ತಿಳಿಸಿದರು.

**ತರಕಾರಿ ಅಭಿವೃದ್ಧಿಗೂ ಸಹಕಾರಿ:** ಗಗನಯಾನಿಗಳಿಗೆ ಭವಿಷ್ಯದಆಹಾರಗಮನದಲ್ಲಿಟ್ಟುಕೊಂಡು ಹೆಸರು, ಮೆಂತ್ಯೆ ಬೀಜಗಳ ಮೊಳಕೆಯೊಡೆಯುವಿಕೆ ಮತ್ತು ಸತ್ವ ಬೆಳವಣಿಗೆ ಸೂಕ್ಷ್ಮ ಅಧ್ಯಯನ ನಡೆಸಲಾಗಿದೆ. ಇದು ಬಾಹ್ಯಾಕಾಶದಲ್ಲಿ ಬೀಜಗಳ ಮೊಳಕೆಯೊಡೆಯುವಿಕೆ ಮತ್ತು ಸತ್ವ ಬೆಳವಣಿಗೆಗೆ ಸೂಕ್ಷ್ಮ ಅಧ್ಯಯನ ನಡೆಸಲಾಗಿದೆ.







Vijaya Kar. Pg.06